
ಕವಿತೆ



**ಚನ್ನಪ್ಪ ಅಂಗಡಿ**

ಕಲೆ: ಜಬೀವುಲ್ಲಾ ಎಂ. ಅಸದ್



# ನುಡಿಕಾರಣ

ಈ ನಾಲಿಗೆ...
ಕೆಂಪನ್ನು ಬಿಳಿಚಿ ರುಚಿಗೆ ಕುರುಡಾಗಿ
ಕಿವಿಯಾಲಿಕೆ ನೀಲಿರಸ ತೊಟ್ಟು ಮುನಿಸು
ಅಂಗೈಯಲದೇನೋ ತುರಿಕೆ; ಇರಿಮುರಿಸು
ಮನೆಯೆರಡು, ನಾಲ್ಕು, ಮನಬರಡು
ಬೆಸೆದ ತೋಳು ಕೊಸರಿ ಛಿದ್ರಛಿದ್ರ
ತಬ್ಬಿಕೊಂಡ ಉಕ್ಕಿನ ಬಾಗಿಲ ಪಡಕುಗಳ
ಪ್ರೀತಿ, ಅದೆಷ್ಟು ಶಾಶ್ವತ, ಅದೆಷ್ಟು ಭದ್ರ?
ಶಸ್ತ್ರಾಗಾರದ ತುಂಬೆಲ್ಲ ಸುರಿಯುತ್ತದೆ ಆಮ್ಲಮಳೆ
ಹುಳು ಹತ್ತಿದ ತೂತಿನೊಳಗೂ ತೂರುತ್ತದೆ ಜ್ವಾಲೆ
ಪೊರೆ ಬಿಗಿದುಕೊಂಡ ಕಿಟಕಿ ಸರಳೊಂದು
ಬಾಲ ಸಿಕ್ಕಿಸಿಕೊಳ್ಳಲು ಹುಡುಕುತಿದೆ ತುಪಾಕಿನಗುಳಿ
ಕಟಕರಿಸುವ ಹಲ್ಲಿಗೆ ತಿದಿಯೂದುತ್ತದೆ ಅಡಿಯಡಿ–
ಗೂ, ಕಡಿ ಹೊಡಿ ಬಡಿ, ಸಾಯ್‌ಬಡಿ
ಗಡಿವಿಸ್ತಾರ ಆರಿದಮನ, ಗಾಯಾಳು ಶಯನಕ್ಕೆ
ಹೊಡಮರಳುತಿದೆ ಈ ನಾಲಿಗೆ ಮುಳ್ಳು ಹಾಸಿಗೆಯಾಗಿ...
ಘಟಸರ್ಪದ ಕಾವಲಿ–ನಲಿ ಮಸೆದಾಯುಧಗಳ ಬಣವೆಯೊಟ್ಟಿ
ಒರೆಯಿಂದೊರೆದ ಕರಾಳ ಖರಷಾಣಕೆ
ತಾಗುತಿದೆ ಕಿಡಿ ಕುಡಿಯೊಡೆಯಲು
ಮೆಟ್ಟಿರಿಯುವ ಗಟ್ಟಿತನವೇ ಲೇಸೆನ್ನುತ
ಖರವಿಷಾಣದ ಕತೆಯಾಗಿಸುತ
ಆಡಿ ಆಡಾಡಿ ಅಂಗಳದ ತುಂಬೆಲ್ಲ ಉರುಳಾಡಿ
ದಹದಹಿಸಿ ಗಹಗಹಿಸಿ
ಉರಿದುರಿದು ಕಾರೊಡಲು ಸುತ್ತರಿದು ಕತ್ತಲನು ಕಕ್ಕುತ
ಪಿತ್ತ ಚೆಲ್ಲೆನ್ನುತಿದೆ, ಕವಲೊಡೆದ ಸೀಳುನಾಲಿಗೆ
ಮೈಸುತ್ತಿ ನುಂಗುತಿದೆ
ಅಭಿದಮನಿಯುಗುಂಟ ಹರಿದಾಡಿದ
ಅಭಿದಾನ